**ಶಿಕ್ಷಕರ ತರಬೇತಿಯಲ್ಲಿ 3 ಪ್ರಮುಖ ಶೀರ್ಷಿಕೆಗಳಿವೆ.**

I. ಹೊಸದಾಗಿ ಭರ್ತಿಗೊಂಡ ಶಿಕ್ಷಕರಿಗೆ ಒಂದು ವರ್ಷದಲ್ಲಿ 30 ದಿನಗಳ ಪರಿಚಯ ತರಬೇತಿ (Induction Training)

II. ಸೇವಾವಧಿ ಶಿಕ್ಷಕ ತರಬೇತಿ: ಈ ತರಬೇತಿಯನ್ನು ಎರಡು ಸ್ಥರಗಳಲ್ಲಿ ನೀಡಲಾಗುತ್ತದೆ.

   1. ಬ್ಲಾಕ್ ಸ್ಥರ: 10 ದಿನಗಳು
   2. ಕ್ಲಸ್ಟರ್ ಸ್ಥರ: 10 ದಿನಗಳು
   3. ಉಸ್ತುವಾರಿ ಸಿಬ್ಬಂದಿ(BRP/CRP/ECO) ಗಳ ತರಬೇತಿ: 10 ದಿನಗಳು

**2012-13 ನೇ ಸಾಲಿನಲ್ಲಿ 3 ಪ್ರಮುಖ ಶೀರ್ಷಿಕೆಯಡಿ ಶಿಕ್ಷಕರ ಪ್ರಗತಿಯನ್ನು ಈ ಕೆಳಗೆ ಕೊಡಲಾಗಿದೆ**

**I.** ಹೊಸದಾಗಿ ನೇಮಕಗೊಂಡ ಶಿಕ್ಷಕರ ಪರಿಚಯ ತರಬೇತಿ ಪ್ರಗತಿ: ಈ ವರ್ಷದಲ್ಲಿ ಶಿಕ್ಷಕರ ಯಾವ ನೇಮಕಾತಿಯು ಇಲ್ಲದ್ದರಿಂದ ಸದ್ಯದ ವರ್ಷದಲ್ಲಿ ಈ ತರಬೇತಿ ನಡೆದಿಲ್ಲ.

**II.** ಸೇವಾವಧಿ ಶಿಕ್ಷಕರ ತರಬೇತಿ ಪ್ರಗತಿ: ಸೂಕ್ಷ್ಮ ಸ್ಥರದಲ್ಲಿನ ಶಿಕ್ಷಣ ಸಂಬಂಧಿತ ವಿಷಯಗಳು ಗುಣಾತ್ಮಕತೆಯ ಸಾಧನೆಗೆ ನೇರವಾಗಿ ಸಂಬಂಧಿಸಿದೆ. 2012-13 ರಲ್ಲಿ ಆಯೋಜಿಸಲಾದ ಶಿಕ್ಷಕ ತರಬೇತಿಗಳಲ್ಲಿ ಶಿಕ್ಷಕರಿಗೆ ವಿಷಯವಸ್ತು, ನೂತನ ಪಠ್ಯವಸ್ತು, ಪರಿಚಯ ಕಾರ್ಯಕ್ರಮ, ಬೋಧನಾ ವಿಧಾನ, ಸಾಮರ್ಥ್ಯವರ್ಧನೆ ಇತ್ಯಾದಿ ವಿಷಯಗಳನ್ನು ಪರಿಗಣಿಸಲಾಯಿತು. ಸರಣಿ ಕ್ರಮದ ವಿಧಾನವನ್ನು ಅನುಸರಿಸಿ ಶಿಕ್ಷಕ ತರಬೇತಿ ಮುಖಾಂತರ ಶಿಕ್ಷಕರ ಸಾಮರ್ಥ್ಯವರ್ಧನೆ ತಂತ್ರವನ್ನು ಕಾರ್ಯರೂಪಕ್ಕೆ ತರಲಾಗಿದೆ.

**III.** ಬ್ಲಾಕ್ ಮಟ್ಟದಲ್ಲಿ ನಡೆಸಲಾದ ತರಬೇತಿ ಕಾರ್ಯಕ್ರಮಗಳ ಪ್ರಗತಿ: ಬ್ಲಾಕ್ ಮಟ್ಟದಲ್ಲಿ ನಡೆಸಲಾದ ಪ್ರಮುಖ ತರಬೇತಿ ಕಾರ್ಯಕ್ರಮಗಳ ಪ್ರಗತಿ ಈ ಕೆಳಗಿನಂತಿದೆ.

   **a)** 5ನೇ ತರಗತಿ ಹೊಸಪಠ್ಯಪುಸ್ತಕ ತರಬೇತಿ (ರಚನಾ ತರಬೇತಿ)
   **b)** 8ನೇ ತರಗತಿ ಹೊಸಪಠ್ಯಪುಸ್ತಕ ತರಬೇತಿ (ರಚನಾ ತರಬೇತಿ)
   **c)** ಶಿಕ್ಷಕರಿಗೆ ಬ್ರಿಟಿಷ್ ಕೌನ್ಸಿಲ್ ನಿಂದ ಸಂವಹನಾತ್ಮಕ ಇಂಗ್ಲಿಷ್ ನಲ್ಲಿ ತರಬೇತಿ
   **d)** ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಬಗ್ಗೆ ಶಿಕ್ಷಕರಿಗೆ ತರಬೇತಿ
   **e)** ನಲಿ ಕಲಿ ವಿಧಾನ ಮೇಲೆ ಶಿಕ್ಷಕರಿಗೆ ಪುನಶ್ಚೇತನ ತರಬೇತಿ
   **f)** ನೀತಿಶಿಕ್ಷಣ ಮತ್ತು ಮಾರ್ಗದರ್ಶನದ ಬಗ್ಗೆ ಶಿಕ್ಷಕರಿಗೆ ತರಬೇತಿ
   **g)** ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಕ್ರಮಕ್ಕೆ ಸಂಬಂಧಿಸಿದ ಶಿಕ್ಷಕರಿಗೆ ತರಬೇತಿ
   **h)** ಸೇವಾದಳಕ್ಕೆ ಸಂಬಂಧಿಸಿದಂತೆ ಶಿಕ್ಷಕರಿಗೆ ತರಬೇತಿ
   **i)** ಶಾಲಾಧಾರಿತ ಕ್ಲಸ್ಟರ್ ವಿನಿಮಯ ಸಭೆ

**ಬ್ಲಾಕ್ ಸ್ಥರದಲ್ಲಿ ಆಯೋಜಿಸಲಾದ ತರಬೇತಿ ಕಾರ್ಯಕ್ರಮಗಳ ಪ್ರಗತಿ:**

a) **5ನೇ ತರಗತಿ ಹೊಸಪಠ್ಯಪುಸ್ತಕ ತರಬೇತಿ (ರಚನಾ ತರಬೇತಿ) – 5 ದಿನಗಳು**

**ತರಬೇತಿಯ ಉದ್ದೇಶಗಳು:**

- ಎನ್.ಸಿ.ಎಫ್-2005 ಮತ್ತು ಆರ್.ಟಿ.ಇ -2009 ರಂತೆ ಹೊಸ ಪಠ್ಯಪುಸ್ತಕಗಳನ್ನು ಅರ್ಥಪೂರ್ಣವಾಗಿ ತರಗತಿಯಲ್ಲಿ ಬಳಸಲು ಶಿಕ್ಷಕರನ್ನು ಸಜ್ಜುಗೊಳಿಸುವುದು.
- ಶಿಕ್ಷಕರ ಪಾಠ ನಿರ್ವಹಣಾ ವಿಧಾನವು ಅನುಭವಾತ್ಮಕ ಚಟುವಟಿಕೆಗಳಾಗಿ, ಜ್ಞಾನವು ಶಾಲೆಯ ಹೊರಗಿನ ಜೀವನಕ್ಕೆ ಪ್ರಸ್ತುತವಾಗುವಂತೆ ಯೋಜಿಸಿಕೊಳ್ಳುವುದು.
- ಹೊಸ ಪಠ್ಯಪುಸ್ತಕದಲ್ಲಿ ಅಳವಡಿಸಲಾದ ರಚನಾತ್ಮಕತೆ ವಿಧಾನವನ್ನು ಶಿಕ್ಷಕರು ತಿಳಿದುಕೊಳ್ಳಲು ಸಹಾಯ ಮಾಡುವುದು.
- ಶಿಕ್ಷಕರು ಕೇವಲ ಜ್ಞಾನದ ಸರಬರಾಜುದಾರರಾಗುವುದಕ್ಕಿಂತ ಕಲಿಕೆ ಅನುಕೂಲಿಸುವವರಾಗಿ, ಸುಗಮಕಾರರಾಗಿ ತಮ್ಮನ್ನು ತಾವೇ ಮಾರ್ಪಡಿಸಿಕೊಳ್ಳಲು ಸಜ್ಜುಗೊಳಿಸುವುದು.
- ವಿವಿಧ ವಿಷಯಗಳನ್ನು ಸಮ್ಮಿಳಿತಗೊಳಿಸಿ ಕಲಿಕೆ ಸಾಧಿಸುವುದಕ್ಕೆ ಔಚಿತ್ಯಪೂರ್ಣ ಸಂವಹನ ಪ್ರಾಮುಖ್ಯತೆಯನ್ನು ಶಿಕ್ಷಕರಿಗೆ ತಿಳಿಸುವುದು.
- ನೂತನ ಪಠ್ಯಪುಸ್ತಕದಲ್ಲಿಜನ ಹೊಸ ಅಂಶಗಳ. ಆಶಯಗಳ ಬಗ್ಗೆ ಶಿಕ್ಷಕರಿಗೆ ತಿಳುವಳಿಕೆ ಮೂಡಿಸುವುದು.
- ವಿಮರ್ಶಾತ್ಮಕ ಶಿಕ್ಷಣ ಕ್ರಮದ ಬಗ್ಗೆ ಶಿಕ್ಷಕರಿಗೆ ತಿಳುವಳಿಕೆ ಮೂಡಿಸುವುದು.
- ತರಗತಿಯಲ್ಲಿ ಕಲಿಕೆ ಅನುಕೂಲಿಸುವ ವಿಧಾನಗಳ ಬಗ್ಗೆ ಶಿಕ್ಷಕರಿಗೆ ಪುನರ್ಮನನ ಮಾಡುವುದು.
- ಹೊಸಪಠ್ಯಪುಸ್ತಕದಲ್ಲಿ ಜ್ಞಾನರಚನೆ, ಪುನರ್ರಚನೆಗೆ ಇರುವ ಅವಕಾಶಗಳ ಬಗ್ಗೆ ತಿಳಿಸುವುದು.
- ವಿದ್ಯಾರ್ಥಿಗಳ ವರ್ಕ್ ಬುಕ್ ನ ಉದ್ದೇಶಗಳ ಬಗ್ಗೆ ಶಿಕ್ಷಕರಿಗೆ ಪರಿಚಯ ಮಾಡಿಸುವುದು.
- ಪ್ರಮುಖಾಂಶಗಳ ಬಗ್ಗೆ ಶಿಕ್ಷಕರಿಗೆ ತಿಳುವಳಿಕೆ ಮೂಡಿಸುವುದು.

**ತರಬೇತಿಯ ಗುರಿ 77494 ಶಿಕ್ಷಕರಾಗಿದ್ದು ಒಟ್ಟು 78164 ಶಿಕ್ಷಕರು 5ನೇ ತರಗತಿ ರಚನಾ ತರಬೇತಿಯನ್ನು ಪಡೆದಿರುತ್ತಾರೆ.**

b) **8ನೇ ತರಗತಿ ಹೊಸಪಠ್ಯಪುಸ್ತಕ ತರಬೇತಿ (ರಚನಾ ತರಬೇತಿ) – 5 ದಿನಗಳು:**

**ತರಬೇತಿಯ ಉದ್ದೇಶಗಳು:**

- ಎನ್.ಸಿ.ಎಫ್-2005 ಮತ್ತು ಆರ್.ಟಿ.ಇ -2009 ರಂತೆ ಹೊಸ ಪಠ್ಯಪುಸ್ತಕಗಳನ್ನು ಅರ್ಥಪೂರ್ಣವಾಗಿ ತರಗತಿಯಲ್ಲಿ ಬಳಸಲು ಶಿಕ್ಷಕರನ್ನು ಸಜ್ಜುಗೊಳಿಸುವುದು.
- ಶಿಕ್ಷಕರ ಪಾಠ ನಿರ್ವಹಣಾ ವಿಧಾನವು ಅನುಭವಾತ್ಮಕ ಚಟುವಟಿಕೆಗಳಾಗಿ, ಜ್ಞಾನವು ಶಾಲೆಯ ಹೊರಗಿನ ಜೀವನಕ್ಕೆ ಪ್ರಸ್ತುತವಾಗುವಂತೆ ಯೋಜಿಸಿಕೊಳ್ಳುವುದು.
- ಹೊಸ ಪಠ್ಯಪುಸ್ತಕದಲ್ಲಿ ಅಳವಡಿಸಲಾದ ರಚನಾತ್ಮಕತೆ ವಿಧಾನವನ್ನು ಶಿಕ್ಷಕರು ತಿಳಿದುಕೊಳ್ಳಲು ಸಹಾಯ ಮಾಡುವುದು.

- ಶಿಕ್ಷಕರು ಕೇವಲ ಜ್ಞಾನದ ಸರಬರಾಜುದಾರರಾಗುವುದಕ್ಕಿಂತ ಕಲಿಕೆ ಅನುಕೂಲಿಸುವವರಾಗಿ, ಸುಗಮಕಾರರಾಗಿ ತಮ್ಮನ್ನು ತಾವೇ ಮಾರ್ಪಡಿಸಿಕೊಳ್ಳಲು ಸಜ್ಜುಗೊಳಿಸುವುದು.
- ವಿವಿಧ ವಿಷಯಗಳನ್ನು ಸಮ್ಮಿಳಿತಗೊಳಿಸಿ ಕಲಿಕೆ ಸಾಧಿಸುವುದಕ್ಕೆ ಔಚಿತ್ಯಪೂರ್ಣ ಸಂವಹನ ಪ್ರಾಮುಖ್ಯತೆಯನ್ನು ಶಿಕ್ಷಕರಿಗೆ ತಿಳಿಸುವುದು.
- ನೂತನ ಪಠ್ಯಪುಸ್ತಕದಲ್ಲಿನ ಹೊಸ ಅಂಶಗಳ. ಆಶಯಗಳ ಬಗ್ಗೆ ಶಿಕ್ಷಕರಿಗೆ ತಿಳುವಳಿಕೆ ಮೂಡಿಸುವುದು.
- ವಿಮರ್ಶಾತ್ಮಕ ಶಿಕ್ಷಣ ಕ್ರಮದ ಬಗ್ಗೆ ಶಿಕ್ಷಕರಿಗೆ ತಿಳುವಳಿಕೆ ಮೂಡಿಸುವುದು.
- ತರಗತಿಯಲ್ಲಿ ಕಲಿಕೆ ಅನುಕೂಲಿಸುವ ವಿಧಾನಗಳ ಬಗ್ಗೆ ಶಿಕ್ಷಕರಿಗೆ ಪುನರ್ಮನನ ಮಾಡುವುದು.
- ಹೊಸಪಠ್ಯಪುಸ್ತಕದಲ್ಲಿ ಜ್ಞಾನರಚನೆ, ಪುನರ್ರಚನೆಗೆ ಇರುವ ಅವಕಾಶಗಳ ಬಗ್ಗೆ ತಿಳಿಸುವುದು.
- ವಿದ್ಯಾರ್ಥಿಗಳ ವರ್ಕ್ ಬುಕ್ ನ ಉದ್ದೇಶಗಳ ಬಗ್ಗೆ ಶಿಕ್ಷಕರಿಗೆ ಪರಿಚಯ ಮಾಡಿಸುವುದು.
- ಪ್ರಮುಖಾಂಶಗಳ ಬಗ್ಗೆ ಶಿಕ್ಷಕರಿಗೆ ತಿಳುವಳಿಕೆ ಮೂಡಿಸುವುದು.

**ಒಟ್ಟು 30816 ಶಿಕ್ಷಕರಲ್ಲಿ 29960 ಶಿಕ್ಷಕರಿಗೆ 8ನೇ ತರಗತಿ ರಚನಾ ತರಬೇತಿಯನ್ನು ನೀಡಲಾಗಿದೆ.**

## c) ಯೂನಿಸೆಫ್ ನ ಸಹಯೋಗದಲ್ಲಿ ಬ್ರಿಟಿಷ್ ಕೌನ್ಸಿಲ್ ನಿಂದ ಸಂವಹನಾತ್ಮಕ ಇಂಗ್ಲೀಷ್ ಬಗ್ಗೆ ಶಿಕ್ಷಕರಿಗೆ ತರಬೇತಿ – 05 ದಿನಗಳು:

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲೀಷ್ ಭಾಷೆಯನ್ನು ಇಂಗ್ಲೀಷ್ ಭಾಷಾ ಬೋಧನೆಯಲ್ಲಿ ಬಳಸುವಾಗ ಉಂಟಾಗುತ್ತಿರುವ ಸಮಸ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯದಲ್ಲಿ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲೀಷ್ ತರಬೇತಿಯನ್ನು ನೀಡಲು ನಿರ್ಧರಿಸಲಾಯಿತು. ಅದರಂತೆ ಬ್ರಿಟಿಷ್ ಕೌನ್ಸಿಲ್ ನೊಂದಿಗೆ ಒಪ್ಪಂದ ಮಾಡಿಕೊಂಡು ಯೂನಿಸೆಫ್ ನವರ ಸಹಯೋಗದೊಂದಿಗೆ ಈ ಸಾಲಿನಲ್ಲಿ ಎಲ್ಲಾ 228987 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ತರಬೇತಿಯನ್ನು ನೀಡಲು ನಿರ್ಧರಿಸಲಾಯಿತು. ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ರಾಜ್ಯಮಟ್ಟದಲ್ಲಿ ತರಬೇತಿ ನೀಡಲಾಯಿತು.ಶಿಕ್ಷಕರಿಗೆ ಬ್ಲಾಕ್ ಹಂತದಲ್ಲಿ ತರಬೇತಿ ನೀಡಲಾಗಿದೆ. **2012-13ನೇ ಸಾಲಿನಲ್ಲಿ ಒಟ್ಟು 161807 ಶಿಕ್ಷಕರು ಬ್ರಿಟಿಷ್ ಕೌನ್ಸಿಲ್ ತರಬೇತಿ ಪ್ರಯೋಜನ ಪಡೆದಿರುತ್ತಾರೆ.**

**ಉದ್ದೇಶಗಳು:**

- ಎಲ್ಲಾ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಬೋಧನಾ ಸಾಮರ್ಥ್ಯ ಮತ್ತು ಭಾಷಾ ಪ್ರಭುತ್ವದ ಕೌಶಲವನ್ನು ಅಭಿವೃದ್ಧಿಗೊಳಿಸುವುದು.
- ಎನ್.ಸಿ.ಎಫ್-2005 ರ ಆಶಯದಂತೆ ಶಿಶುಸ್ನೇಹಿ, ಶಿಶುಕೇಂದ್ರಿತ ಮತ್ತು ಚಟುವಟಿಕೆ ಆಧಾರಿತ ಬೋಧನಾ ಪ್ರಕ್ರಿಯೆಗಳನ್ನು ನಡೆಸಲು ಶಿಕ್ಷಕರನ್ನು ಸಜ್ಜುಗೊಳಿಸುವುದು.
- ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಕಾಯ್ದೆ ಹಾಗೂ ಎನ್.ಸಿ.ಎಫ್ -2005 ರ ಆಶಯದಂತೆ ಶಿಕ್ಷಕರನ್ನು ಬೋಧನೆ ಮತ್ತು ವಿದ್ಯಾರ್ಥಿಗಳ ಪ್ರಗತಿಯನ್ನು ಅಳೆಯಲು ತಯಾರು ಮಾಡುವುದು.

- ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ನೂತನ ಬೋಧನಾ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.

**ಫಲಿತಾಂಶ:**

- ತರಬೇತಿ ಪಡೆದ ಶಿಕ್ಷಕರು ತರಗತಿ ಪ್ರಕ್ರಿಯೆಯಲ್ಲಿ ಇಂಗ್ಲೀಷ್ ಭಾಷೆಯನ್ನು ಬಳಸುವ ಆತ್ಮವಿಶ್ವಾಸ ಹೊಂದಿರುತ್ತಾರೆ.
- ಶಿಕ್ಷಕರು ಶಿಶುಕೇಂದ್ರಿತ ಮತ್ತು ಶಿಶುಸ್ನೇಹಿ ಬೋಧನಾ ಚಟುವಟಿಕೆಗಳನ್ನು ತರಗತಿಗಳಲ್ಲಿ ಅಳವಡಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರುತ್ತಾರೆ.
- ಪೋಷಕರೊಂದಿಗೆ ಇಂಗ್ಲೀಷ್ ಕಲಿಕೆಯ ಬಗ್ಗೆ ವಿಚಾರ ವಿನಿಮಯ ಮಾಡಿರುತ್ತಾರೆ.

## d) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ತರಬೇತಿ (ಸಿ.ಸಿ.ಇ ತರಬೇತಿ) – ದಿನಗಳು

ವಿದ್ಯಾರ್ಥಿಯ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿನ ಸಾಧನೆ, ಶಾಲಾ ಸನ್ನಿವೇಶದಲ್ಲಿ ವಿವಿಧ ಪಾತ್ರ ನಿರ್ವಹಣೆ, ಪಾಲ್ಗೊಳ್ಳುವಿಕೆ ಮತ್ತು ಪ್ರಗತಿಯನ್ನು ವಿವಿಧ ತಂತ್ರಗಳ ಮೂಲಕ ಸಮಗ್ರವಾಗಿ ದಾಖಲಿಸಿಕೊಂಡು, ವಿಶ್ಲೇಷಿಸಿ, ಮಗುವಿನ ಸರ್ವಾಂಗೀಣ ಅಭಿವೃದ್ಧಿ ಅನುಕೂಲಿಸುವ ಪ್ರಕ್ರಿಯೆಗೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವೆನ್ನಬಹುದು.

1986 ರಾಷ್ಟ್ರೀಯ ಶಿಕ್ಷಣ ನೀತಿಯು ಶಾಲಾ ಮೌಲ್ಯಮಾಪನವನ್ನು ಬಲಗೊಳಿಸುವ ನಿಟ್ಟಿನಲ್ಲಿ ನಿರಂತರ ಮತ್ತು ವ್ಯಾಪಕ ಎಂಬ ಪದವನ್ನು ಗುರುತಿಸಿರುವುದು ವಿಶೇಷ. ಇತ್ತೀಚಿನ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು -2005 ಮತ್ತು ಆರ್.ಟಿ.ಇ-2009 ರ ಸೆಕ್ಷನ್ 29 (ಎಚ್) ಮತ್ತು ಸೆಕ್ಷನ್ 30 ಸಹ ಇದಕ್ಕೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿ ಬೋಧನಾ ಕಲಿಕೆಯ ಪ್ರಕ್ರಿಯೆಯನ್ನು ಎಲ್ಲ ರೀತಿಯಿಂದಲೂ ಬಲವರ್ಧನೆಗೊಳಿಸಬೇಕು ಎಂಬುದಾಗಿ ಅಭಿಪ್ರಾಯಪಡುತ್ತದೆ.

### ನಿರಂತರ ಮೌಲ್ಯಮಾಪನದ ಅರ್ಥ:

ನಿರಂತರ ಮೌಲ್ಯಮಾಪನವೆಂದರೆ ವಿದ್ಯಾರ್ಥಿಗಳು ಶಾಲೆಯಲ್ಲಿ ನಿರ್ದೇಶಾತ್ಮಕವಾಗಿ ತೊಡಗಿಸಿಕೊಳ್ಳುವ ವಿವಿಧ ಚಟುವಟಿಕೆಗಳಲ್ಲಿನ ಹಾಗೂ ಉಳಿದ ಸಂದರ್ಭಗಳಲ್ಲಿಯೂ ಅವರ ಸಹಜ ವರ್ತನೆಗಳನ್ನು ನಿರಂತರವಾಗಿ ಗಮನಿಸಿ ಪೋಷಿಸುವುದು. ಇಲ್ಲಿ ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿ ಪ್ರಕ್ರಿಯೆಯನ್ನು ಪರಿಗಣಸಲಾಗುತ್ತದೆ.

### ವ್ಯಾಪಕ ಮೌಲ್ಯಮಾಪನದ ಅರ್ಥ:

ವ್ಯಾಪಕ ಮೌಲ್ಯಮಾಪನವೆಂದರೆ ನಿರ್ದಿಷ್ಟಪಡಿಸಿದ ಪಠ್ಯ, ಸಹಪಠ್ಯಗಳನ್ನೊಳಗೊಂಡಂತೆ ಮಗುವಿನ ಎಲ್ಲಾ ವರ್ತನೆಗಳನ್ನೂ ಅವಲೋಕಿಸುವುದೇ ಆಗಿದೆ.

- ನಿರಂತರ ಮೌಲ್ಯಮಾಪನದಿಂದ ಮಗುವಿನ ದೈಹಿಕ, ಬೌದ್ಧಿಕ, ಮಾನಸಿಕ, ಸಾಮಾಜಿಕ, ಬೆಳವಣಿಗೆಯನ್ನು ಗಮನಿಸಿ ಪ್ರಗತಿಯ ನಿರಂತರತೆಯಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಮಗುವಿನ ವ್ಯಕ್ತಿತ್ವ ಯಾವ ರೀತಿಯಲ್ಲಿ ವಿಕಸನಗೊಳ್ಳುತ್ತಿದೆ,ಯಾವ ರೀತಿಯ ಮಧ್ಯವರ್ತನೆಗಳು ಮಗುವಿಗೆ ಉಪಯುಕ್ತವಾಗಬಹುದು ಎಂದು ತಿಳಿಯಲು ಸಾಧ್ಯವಾಗುತ್ತದೆ.

- ವ್ಯಾಪಕ ಮೌಲ್ಯಮಾಪನದಿಂದ ಪಠ್ಯ-ಸಹಪಠ್ಯ ಸಂಯೋಜಿತ ಹಾಗೂ ಮಗುವಿನ ಸಹಜ ವರ್ತನೆಯ ಕ್ಷೇತ್ರಗಳನ್ನು ಗಮನಿಸಿ ಅವುಗಳನ್ನು ಅಭಿವೃದ್ಧಿಪಡಿಸಬಹುದು. ಒಟ್ಟಾರೆಯಾಗಿ ನಿರಂತರ ಮೌಲ್ಯಮಾಪನದಿಂದ ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ಅನುಕೂಲಿಸಲು ಸಾಧ್ಯವಾಗುತ್ತದೆ.

ಸಿಸಿಇ ತರಬೇತಿಗಾಗಿ ಸಾಧನಾ ತರಬೇತಿ ಸಂಚಯ ಸಿದ್ಧಪಡಿಸಿ ಪ್ರಧಾನ ಸಂಪನ್ಮೂಲ ವ್ಯಕ್ತಿಗಳಿಗೆ ರಾಜ್ಯಮಟ್ಟದಲ್ಲಿ ತರಬೇತಿ ನೀಡಲಾಯಿತು. ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ಡಯಟ್ ಗಳಲ್ಲಿ ತರಬೇತಿ ನೀಡಿರುತ್ತಾರೆ.

**ಉದ್ದೇಶಗಳು:**

- ಶಿಕ್ಷಕರಿಗೆ ವ್ಯಾಪಕ ಮೌಲ್ಯಮಾಪನ ಮತ್ತು ನಿರಂತರ ಮೌಲ್ಯಮಾಪನದ ಪ್ರಾಮುಖ್ಯತೆ ಮತ್ತು ಅದನ್ನು ಅಂತರ್ಗತ ಮಾಡಿಕೊಳ್ಳುವುದರ ಬಗ್ಗೆ ತಿಳುವಳಿಕೆ ಮೂಡಿಸುವುದು.
- ನಿರಂತರ ವ್ಯಾಪಕ ಮಾಪನದ ತಂತ್ರಗಳು ಮತ್ತು ವಿಧಾನಗಳ ಬಗ್ಗ ಪರಿಚಯಿಸುವುದು.

**2012-13ನೇ ಸಾಲಿನಲ್ಲಿ 228987 ಶಿಕ್ಷಕರಲ್ಲಿ 192787 ಶಿಕ್ಷಕರು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ತರಬೇತಿ (ಸಿ.ಸಿ.ಇ ತರಬೇತಿ) ಯ ಪ್ರಯೋಜನ ಪಡೆದಿರುತ್ತಾರೆ.**

## e) ನಲಿ-ಕಲಿ ವಿಧಾನದ ಮೇಲೆ ಶಿಕ್ಷಕರಿಗೆ ಪುನಶ್ಚೇತನ ತರಬೇತಿ:

ಗುಣಾತ್ಮಕ ಶಿಕ್ಷಣವನ್ನು ಸಾಧಿಸುವ ಉದ್ದೇಶದಿಂದ ಹಲವು ಕಾರ್ಯಕ್ರಮಗಳನ್ನು ಪ್ರಾಥಮಿಕ ಮಟ್ಟದಲ್ಲಿ ಮಾತ್ರ ಅನುಷ್ಠಾನಗೊಳಿಸಲಾಗುತ್ತಿದೆ. ಅಂತಹ ಕಾರ್ಯಗಳಲ್ಲಿ ನಲಿ-ಕಲಿ ಒಂದಾಗಿದೆ. ಆನಂದಮಯ ಕಲಿಕೆ, ಸ್ವಯಂ ಕಲಿಕೆ ಮತ್ತು ತನ್ನದೇ ಆದ ಗತಿಯಲ್ಲಿ ಕಲಿಯುವುದು ಇವು ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳು. ಇದು ಶಿಶುಸ್ನೇಹಿ ಚಟುವಟಿಕೆ ಆಧಾರಿತ ಬೋಧನೆಯಾಗಿದೆ. ಕರ್ನಾಟಕದ ಎಲ್ಲಾ ಕನ್ನಡ ಮಾಧ್ಯಮ ಶಾಲೆಗಳಲ್ಲಿ 1,2,3,ನೇ ತರಗತಿಗಳಲ್ಲಿ ಈ ಬೋಧನಾ ವಿಧಾನವನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ.

ಈ ಪರಿಸ್ಥಿತಿಯಲ್ಲಿ ನಲಿ-ಕಲಿ ಕುರಿತಂತೆ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಇದರಿಂದ ಶಿಕ್ಷಕರಿಗೆ ಬೋಧನಾ ಕಲಿಕೆಯ ಪ್ರಕ್ರಿಯೆ ಹಾಗೂ ತರಗತಿ ನಿರ್ವಹಣೆಗಳಲ್ಲಿ ಆಸಕ್ತರೂ ಆಗುವುದಕ್ಕೆ ಸಹಾಯವಾಗುತ್ತದೆ. ಈ ಕಾರ್ಯಕ್ರಮ 3 ದಿನಗಳ ಅವಧಿಯದಾಗಿದ್ದು **ಈ ತರಬೇತಿ ಒಟ್ಟು 60,995 ಶಿಕ್ಷಕರಿಗೆ ಪ್ರಯೋಜನಕಾರಿಯಾಗಿದೆ.**

## f) ನೀತಿಶಿಕ್ಷಣ ಮತ್ತು ಮಾರ್ಗದರ್ಶನ ತರಬೇತಿ - 2 ದಿನಗಳು

**ಉದ್ದೇಶಗಳು:**

- ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಲು ಹಾಗೂ ದೇಶ ಮತ್ತು ಜನರ ಆಶೋತ್ತರಗಳಿಗಾಗಿ ಸಕಾರಾತ್ಮಕವಾಗಿ ಸ್ಪಂದಿಸಲು ತರಬೇತುಗೊಳಿಸುವುದು.
- ವಿದ್ಯಾರ್ಥಿಗಳಲ್ಲಿ ಸಾಮಾಜಿಕ, ನೈತಿಕ, ಸೌಂದರ್ಯೋಪಾಸಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸಲು ಶಿಕ್ಷಕರನ್ನು ತರಬೇತುಗೊಳಿಸುವುದು.

**ಫಲಿತಾಂಶ:**

- ಶಿಕ್ಷಕರು ನೀತಿಶಿಕ್ಷಣ ಮತ್ತು ಮಾರ್ಗದರ್ಶನದ ಅಗತ್ಯತೆ ಮತ್ತು ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವ ಬಗ್ಗೆ ತಿಳುವಳಿಕೆ ಪಡೆದಿರುತ್ತಾರೆ.

**2012-13ನೇ ಸಾಲಿನಲ್ಲಿ 122574 ಶಿಕ್ಷಕರಿಗೆ ನೀತಿಶಿಕ್ಷಣ ನೀಡಲು ಗುರಿ ಇದ್ದು 36923 ಶಿಕ್ಷಕರು ತರಬೇತಿ ಪ್ರಯೋಜನ ಪಡೆದಿರುತ್ತಾರೆ.**

## g) <u>ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯಕ್ರಮ ಕುರಿತಂತೆ ಶಿಕ್ಷಕರ ತರಬೇತಿ (06 ದಿನಗಳು)</u>

ಯುವಜನಾಂಗವು ತನ್ನ ಪೂರ್ಣ ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ಆಧ್ಯಾತ್ಮಕ ಅಂತಃಶಕ್ತಿಯನ್ನು ಸಾಧಿಸುವಂತೆ ಯುವಜನಾಂಗವನ್ನು ವಿಕಾಸಗೊಳಿಸಿ ಅವರನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿಸಿ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮುದಾಯಗಳ ಸದಸ್ಯರನ್ನಾಗಿಸುವುದಕ್ಕೆ ಕೊಡುಗೆ ನೀಡುವುದು ಸ್ಕೌಟ್ಸ್ ಗೈಡ್ಸ್ ಆಂದೋಲನದ ಉದ್ದೇಶವಾಗಿದೆ. ಪ್ರತಿ ಶಾಲೆಯಲ್ಲಿಯೂ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರಗಳನ್ನು ಸ್ಥಾಪಿಸಬೇಕು. ಈ ಕೇಂದ್ರಗಳ ಪರಿಣಾಮಕಾರಿ ಅನುಷ್ಠಾನವಾಗಬೇಕಾದರೆ ಶಿಕ್ಷಕರಿಗೆ ಉತ್ತಮ ಮಾರ್ಗದರ್ಶನ ಲಭಿಸಬೇಕು. ಇದರ ಉದ್ದೇಶಗಳೆಂದರೆ 'ಬಾಳು ಬಾಳಲು ಬಿಡು' ತತ್ವಗಳು, ರಾಷ್ಟ್ರೀಯ ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುವುದು, ದಿನಂಪ್ರತಿ ಒಂದು ಒಳ್ಳೆಯ ಕಾರ್ಯ  ಮನೋಭಾವನೆಗಳು, ಆರೋಗ್ಯಕರ, ಆನಂದಮಯ ಮತ್ತು ಉಪಯುಕ್ತ ಪ್ರಜೆಗಳನ್ನಾಗಿ ವಿದ್ಯಾರ್ಥಿಗಳನ್ನು ರೂಪಿಸುವುದು.

**2012-13ನೇ ಸಾಲಿನಲ್ಲಿ ಒಟ್ಟು 2400 ಶಿಕ್ಷಕರಿಗೆ ತರಬೇತಿ ನೀಡಲು ಯೋಜಿಸಲಾಗಿತ್ತು. 729 ಶಿಕ್ಷಕರು ತರಬೇತಿ ಪ್ರಯೋಜನವನ್ನು ಪಡೆದಿರುತ್ತಾರೆ.**

**ಫಲಿತಾಂಶ:**

ಈ ತರಬೇತಿಯಲ್ಲಿ  ಶಿಕ್ಷಕರಿಗೆ  ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಗಮನ ನೀಡಲು ಮನವರಿಕೆ ಮಾಡಿಕೊಡಲಾಯಿತು. ಸರ್ವಾಂಗೀಣ ಅಭಿವೃದ್ಧಿಯಿಂದ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆ, ನೈತಿಕ ಮೌಲ್ಯ, ಶಿಸ್ತು, ದೇಶಭಕ್ತಿ, ಸಾಮರಸ್ಯತೆಯತ್ತ ಮಕ್ಕಳನ್ನು ಕೊಂಡೊಯ್ಯಬಹುದು ಎಂದು ತಿಳಿಸಿಕೊಡಲಾಯಿತು.

## h) <u>ಸೇವಾದಳವನ್ನು ಕುರಿತ ಶಿಕ್ಷಕರ ತರಬೇತಿ (06 ದಿನಗಳು)</u>

ಭಾರತ-ಸೇವಾದಳದ ಮುಖ್ಯ ಉದ್ದೇಶ ದೇಶಪ್ರೇಮ, ಒಳ್ಳೆಯ ಆರೋಗ್ಯ ಮತ್ತು ಸ್ವಾಸ್ಥ್ಯ, ಸ್ವಾವಲಂಬನೆ, ತ್ಯಾಗ,, ಶಿಸ್ತು, ತಾಳ್ಮೆ ಮತ್ತು ಇತರ ಸದ್ಗುಣಗಳು ಇವುಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು, ಅಪಾಯಕರ ಪರಿಸ್ಥಿತಿಯಲ್ಲಿ ಪರಿಹಾರ ಕಂಡುಹಿಡಿಯುವುದು ಮತ್ತು ಪರಿಸ್ಥಿತಿಯನ್ನು ಎದುರಿಸುವುದು, ಪಶುಪಕ್ಷಿಗಳ ರಕ್ಷಣೆ, ಸಸ್ಯಗಳು ಹಾಗೂ ಸಾರ್ವಜನಿಕ ಆಸ್ತಿಗಳ ರಕ್ಷಣೆ ಇವುಗಳ ಬಗ್ಗ ಶಿಕ್ಷಣ ನೀಡುವುದು ಸಹ ಸೇವಾದಳದ ಮುಖ್ಯ ಗುರಿಯಾಗಿದೆ.

**2012-13ನೇ ಸಾಲಿನಲ್ಲಿ ತರಬೇತಿ ಪಡೆಯಬೇಕಾಗಿದ್ದ 2400 ಶಿಕ್ಷಕರಲ್ಲಿ 1959 ಶಿಕ್ಷಕರು ಸೇವಾದಳ ತರಬೇತಿ ಪ್ರಯೋಜನವನ್ನು ಪಡೆದಿದ್ದಾರೆ.**

**ಫಲಿತಾಂಶ:**

- ಸೇವಾದಳ ತರಬೇತಿಯು ನಶಿಸುತ್ತಿರುವ ಮೌಲ್ಯಗಳ ಪುನರ್ ಸ್ಥಾಪನೆ ಮತ್ತು ಅವುಗಳನ್ನು ವಿದ್ಯಾರ್ಥಿಗಳಲ್ಲಿ ರೂಪಿಸುವ ಬಗ್ಗೆ ಶಿಕ್ಷಕರಲ್ಲಿ ಒಂದು ಒಳನೋಟ ಕಲಿಕೆಯನ್ನು ಉಂಟುಮಾಡಲಾಯಿತು.

## i) **ಶಾಲಾಧಾರಿತ ಕ್ಲಸ್ಟರ್ ವಿನಿಮಯ ಸಭೆ:**

2012-13ನೇ ಸಾಲಿನಲ್ಲಿ ಎಂಟು ಕ್ಲಸ್ಟರ್ ಮಟ್ಟದ ಸಮಾಲೋಚನೆ ಸಭೆಗಳನ್ನು ಜೂನ್ ತಿಂಗಳಿನಿಂದ ಫೆಬ್ರವರಿ ತಿಂಗಳೊಳಗೆ ನಡೆಸಲಾಯಿತು.

**ಕ್ಲಸ್ಟರ್ ಸಮಾಲೋಚನೆ ಸಭೆಗಳ ಯೋಜನೆಯ ಉದ್ದೇಶಗಳು ಈ ಕೆಳಗಿನಂತಿದೆ.**

- ನಲಿ-ಕಲಿ ಬೋಧನಾ ವಿಧಾನದ ಉದ್ದೇಶಗಳನ್ನು ಪೂರ್ಣಗೊಳಿಸುವುದು.
- ನಲಿ-ಕಲಿ ಪ್ರಕ್ರಿಯೆ ಸುಧಾರಣೆಗೆ ಶಿಕ್ಷಕರನ್ನು ಸಜ್ಜುಗೊಳಿಸುವುದು.
- ಕಡಿಮೆ ವೆಚ್ಚದ ಬೋಧನೋಪಕರಣಗಳ ತಯಾರಿಕಾ ಕೌಶಲವನ್ನು ಶಿಕ್ಷಕರಲ್ಲಿ ಬೆಳೆಸುವುದು
- ಚಟುವಟಿಕಾಧಾರಿತ ಬೋಧನೆಯ ಬಗ್ಗೆ ಶಿಕ್ಷಕರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದು.

**ಸಭೆಯಲ್ಲಿ ಈ ಕೆಳಗಿನ ಚಟುವಟಿಕೆಗಳು ಮತ್ತು ವಿಷಯಗಳನ್ನು ಚರ್ಚಿಸಲಾಯಿತು.**

- ಬೋಧನೆಯ ಸಮಸ್ಯೆಗಳ ಮತ್ತು ಸವಾಲುಗಳ ಬಗ್ಗೆ ಚರ್ಚೆ
- ವಾರ್ಷಿಕ ಕಾರ್ಯ ಯೋಜನೆಯ ಸಿದ್ಧತೆ
- ಮುಂದಿನ ತಿಂಗಳ ಯೋಜನೆಯ ದೃಷ್ಟಿ
- ಓ.ಓ.ಎಸ್.ಸಿ ಮಕ್ಕಳ ಗುರುತು ಹಚ್ಚುವಿಕೆ
- ತರಗತಿಯಲ್ಲಿ ತರಬೇತಿ ತಂತ್ರಗಳ ಅನುಷ್ಠಾನದ ಮೂಲಕ ಶಿಕ್ಷಣದ ಗುಣಾತ್ಮಕತೆಯನ್ನು ಹೆಚ್ಚಿಸುವುದು.
- ಬ್ಲೂ ಪ್ರಿಂಟ್ ಗಳ ಸಿದ್ಧತೆ
- ಶಾಲೆಗಳಲ್ಲಿ ಪಠ್ಯಕ್ರಮ ಅಭಿವೃದ್ಧಿ ಅನುಷ್ಠಾನ
- ಆಡಳಿತಾತ್ಮಕ ವಿಷಯಗಳು

**2012-13ನೇ ಸಾಲಿನಲ್ಲಿ 228987 ಶಿಕ್ಷಕರು ಎಂಟು ದಿನಗಳ ಕ್ಲಸ್ಟರ್ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿರುತ್ತಾರೆ.**

## j) **ಸಮೂಹ ಸಂಪನ್ಮೂಲ ವ್ಯಕ್ತಿಗಳು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಮತ್ತು ಶಿಕ್ಷಣ ಸಂಯೋಜಕರ ಸಾಮರ್ಥ್ಯ ವರ್ಧನಾ ತರಬೇತಿ (ಆಶಯ ತರಬೇತಿ) – ಜಿಲ್ಲಾ ಹಂತ (10 ದಿನಗಳು):**

**ತರಬೇತಿಯ ಉದ್ದೇಶಗಳು:**

- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಮತ್ತು ಗುಣಾತ್ಮಕ ಶಿಕ್ಷಣದಲ್ಲಿ ಸಿ.ಆರ್.ಪಿ/ಬಿ.ಆರ್.ಪಿ/ಇ.ಸಿ.ಓಗಳು ಪಾತ್ರದ ಬಗ್ಗೆ ಹೆಚ್ಚಿನ ತಿಳುವಳಿಕೆ ಹೊಂದುವರು.
- ತಮ್ಮ ವ್ಯಾಪ್ತಿಯ ಶಾಲೆಗಳ ವಸ್ತುಸ್ಥಿತಿಯನ್ನು ವಿಶ್ಲೇಷಿಸಿ, ಶಾಳೆಗಳ ಗುಣಮಟ್ಟವನ್ನು ಉತ್ತಮಪಡಿಸಲು ಶ್ರಮಿಸುವರು.
- ಉತ್ತಮ ಮಾರ್ಗದರ್ಶಕರಾಗಿ ಶಾಲೆಗಳ ಮುಖ್ಯಶಿಕ್ಷಕರು/ಶಿಕ್ಷಕರು/ಮಕ್ಕಳು/ಪೋಷಕರು/ಸಮುದಾಯಕ್ಕೆ ಟಗತ್ಯ ಮಾರ್ಗದರ್ಶನ ನೀಡುವರು.
- ಶೈಕ್ಷಣಿಕ ಮೌಲ್ಯಮಾಪನ ಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವರು ಹಾಗೂ ಶೈಕ್ಷಣಿಕ ಮೌಲ್ಯಮಾಪನವನ್ನು ತಂಡದಲ್ಲಿ ನಿರ್ವಹಿಸುವ ವಿಧಾನ ಮತ್ತು ಪ್ರಯೋಜನಗಳನ್ನು ತಿಳಿಯುವರು.

- ಸಂಪನ್ಮೂಲ ಕೇಂದ್ರಗಳ ಸ್ಥಾಪನೆಯ ಉದ್ದೇಶ ಕಾರ್ಯಚಟುವಟಿಕೆಗಳು ನಿರ್ವಹಿಸಬೇಕಾದ ದಾಖಲೆಗಳು ಇತ್ಯಾದಿಗಳ ಬಗ್ಗ ತಿಳಿಯುವರು.
- ಶೈಕ್ಷಣಿಕ ಸಮಾಲೋಚನಾ ಸಭೆಗಳನ್ನು ಅರ್ಥಪೂರ್ಣವಾಗಿ ನಿರ್ವಹಿಸಿ, ಬೋಧನಾ - ಕಲಿಕಾ ಪ್ರಕ್ರಿಯೆಯನ್ನು ಉತ್ತಮಪಡಿಸುವರು.
- ಶೈಕ್ಷಣಿಕ ಕಾಳಜಿ, ಸಮಯಪಾಲನೆ ಮಾನವ ಸಂಬಂಧಗಳು ಮತ್ತು ಆಪ್ತ ಸಮಾಲೋಚನೆಗಳ ಮಹತ್ವವನ್ನು ಅರಿತು ರೂಢಿಸಿಕೊಳ್ಳುವರು.
- ಶೈಕ್ಷಣಿಕ ಸೂಚ್ಯಾಂಕಗಳನ್ನು ಆಧರಿಸಿ ಕ್ಲಸ್ಟರ್/ಬ್ಲಾಕ್ ನ ಶೈಕ್ಷಣಿಕ ಯೋಜನೆಯನ್ನು ರೂಪಿಸುವರು.
- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು - 2005 ಮತ್ತು ಮಕ್ಕಳ ಹಕ್ಕು ಅಧಿನಿಯಮ -2009 ರ ಮಹತ್ವವನ್ನು ಅರಿತು ಅನುಷ್ಠಾನಗೊಳಿಸುವರು.
- ತಾವು ನಿರ್ವಹಿಸುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ಸ್ವ-ಅವಲೋಕನ ಸ್ವ-ವಿಮರ್ಶೆ ಕೈಗೊಳ್ಳುವುದರ ಮೂಲಕ ಧನಾತ್ಮಕ ಮನೋಭಾವನೆಯನ್ನು ಬೆಳೆಸಿಕೊಳ್ಳುವರು.

**ಫಲಿತಾಂಶ:**

- ಸಮೂಹ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂನ್ಮೂಲ ವ್ಯಕ್ತಿ, ಮತ್ತು ಶಿಕ್ಷಣ ಸಂಯೋಜಕರು ಮತ್ತು ಶೈಕ್ಷಣಿಕ ಕಾರ್ಯಗಳ ತಿಳುವಳಿಕೆ ಪಡೆದಿದ್ದಾರೆ.
- ತಮ್ಮ ಕಾರ್ಯ ಚಟುವಟಿಕೆಗಳು ಶೈಕ್ಷಣಿಕ ಗುಣಮಟ್ಟ ವೃದ್ಧಿಗೆ ಪೂರಕವಾಗಿವೆ ಎಂಬ ಒಳನೋಟವನ್ನು ಪಡೆದಿದ್ದಾರೆ.
- ಶಾಲಾ ಸಂದರ್ಶನ, ಶಾಲೆಗಳ ಮೌಲ್ಯಮಾಪನ, ಸಮಾಲೋಚನಾ ಸಭೆಗಳ ನಿರ್ವಹಣೆ ಮುಂತಾದ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯ ಪಡೆದಿರುತ್ತಾರೆ.
- ತಮ್ಮ ಕಾರ್ಯಕ್ಷೇತ್ರದ ಶಾಲೆಗಳ ಮೌಲ್ಯಮಾಪನ, ಸಮಾಲೋಚನಾ ಸಭೆಗಳ ನಿರ್ವಹಣೆ ಮುಂತಾದ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯ ಪಡೆದಿದ್ದಾರೆ.

**ಒಟ್ಟು 6041 ಕ್ಷೇತ್ರ ಸಿಬ್ಬಂದಿಗಳಲ್ಲಿ 4244 ಸಿಬ್ಬಂದಿಗಳು 2012-13ನೇ ಸಾಲಿನಲ್ಲಿ ಆಶಯ ತರಬೇತಿಯನ್ನು ಪಡೆದಿರುತ್ತಾರೆ**

**2012-13ನೇ ಸಾಲಿನಲ್ಲಿ ನೀಡಿದ ವಿವಿಧ ತರಬೇತಿಗಳು ಈ ಕೆಳಗಿನ ಪ್ರಮುಖ ಅಂಶಗಳ ಅರಿವನ್ನು ಶಿಕ್ಷಕರಲ್ಲಿ ಮೂಡಿಸಲು ಸಹಾಯಕವಾಗಿವೆ.**

- ಮಗುವಿನ ಕಲಿಕಾ ಆಸಕ್ತಿಗಳನ್ನು ಗುರುತಿಸುವ ವಿವಿಧ ಸಾಮರ್ಥ್ಯಗಳನ್ನು ಶಿಕ್ಷಕರಲ್ಲಿ ಮೂಡಿಸಲಾಗಿದೆ.
- ತರಗತಿಯ ಒಳಗೆ ಮತ್ತು ತರಗತಿಯ ಹೊರಗಿನ ವಾತಾವರಣದಲ್ಲಿ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಉಪಯುಕ್ತತೆಯ ಬಗ್ಗೆ ಶಿಕ್ಷಕರು ತಿಳುವಳಿಕೆ ಪಡೆದುಕೊಂಡಿರುತ್ತಾರೆ.
- ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಇರುವ ಕಲಿಕಾ ದೋಷಗಳನ್ನು ಗುರುತಿಸಲು ಮತ್ತು ಅದರ ಪರಿಹಾರ ತಂತ್ರಗಳು ಮತ್ತು ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಪಡೆದುಕೊಂಡಿರುತ್ತಾರೆ.
- ನೂತನ ಬೋಧನಾ ಕಲಿಕಾ ವಿಧಾನಗಳು ಮತ್ತು ತಂತ್ರಗಳು ಮತ್ತು ಚಟುವಟಿಕೆಗಳ ಬಗ್ಗೆ ತಿಳುವಳಿಕೆ ಪಡೆದುಕೊಂಡಿರುತ್ತಾರೆ.
- ನೂತನ ಬೋಧನಾ ಕಲಿಕಾ ವಿಧಾನಗಳು ಮತ್ತು ತಂತ್ರಗಳ ಅಭಿವೃದ್ಧಿಯನ್ನು ಶಿಕ್ಷಕರಲ್ಲಿ ಸಾಧಿಸಲಾಗಿದೆ.
- ಮಗು ಕಲಿಕೆಯಲ್ಲಿ ಗಳಿಸಬೇಕಾದ ಸಾಮರ್ಥ್ಯಗಳ ಬಗ್ಗೆ ಶಿಕ್ಷಕರಲ್ಲಿ ಅರಿವು ಮತ್ತು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಲು ಶಿಕ್ಷಕರಲ್ಲಿ ಆತ್ಮವಿಶ್ವಾಸ ಮೂಡಿಸಲಾಗಿದೆ.

- ನೂತನ 5 ಮತ್ತು 8ನೇ ತರಗತಿ ಪಠ್ಯಪುಸ್ತಕಗಳ ಬಗ್ಗೆ ತರಬೇತಿ (ರಚನಾ ತರಬೇತಿ) ಶಿಕ್ಷಕರಿಗೆ ತುಂಬಾ ಫಲಪ್ರದವಾಗಿದೆ.

**2013-14ನೇ ಸಾಲಿನ ಸೇವಾನಿರತ ಶಿಕ್ಷಕರ ತರಬೇತಿ ವಿವರಗಳು**

- ತರಬೇತಿ ನೀಡಬೇಕಾದ ಶಿಕ್ಷಕರ ಸಂಖ್ಯೆ - 2,26,624
- ತರಬೇತಿಯ ದಿನಗಳು - ಪ್ರತಿ ಶಿಕ್ಷಕರಿಗೆ ತಲಾ 07 ದಿನಗಳು (ಬ್ಲಾಕ್ ಹಂತ - 05 ದಿನಗಳು, ಸ.ಸಭೆ - 02 ದಿನಗಳು)
- ತರಬೇತಿಯ ಒಟ್ಟು ಮಾನವ ದಿನಗಳು - 15,86,368
- ತರಬೇತಿಯ ಒಟ್ಟು ಅನುದಾನ - 15,86,36,800